## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಶ್ರೀ ಟಿ.ಎಂ.ಶೇಕ್ಷಾವಲಿ, ದ್ವಿ.ದ.ಸ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಸಂಡೂರು ಇವರ ವಿರುದ್ಧದ ಆರೋಪಗಳು ಬಗ್ಗೆ – ವಿವರವಾದ ಇಲಾಖಾ ವಿಚಾರಣೆ ನಡೆಸಲು ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವ ಕುರಿತು.

**ಓದಲಾಗಿದೆ.**

1. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ವರ ಅರೆ ಸರ್ಕಾರಿ ಪತ್ರ ಸಂಖ್ಯೆ:ಕಂಪ್ಲೇಂಟ್/ಉಪಲೋಕ್/ಜಿಎಲ್‌ಬಿ/2376/2013/ಡಿಆರ್‌ಇ-5, ದಿ:30.1.2019.

2. ಮಾನ್ಯ ಉಪ ಲೋಕಾಯುಕ್ತರವರ ಲೋಕಾಯುಕ್ತ ಕಾಯ್ದೆ ಕಲಂ12(3)ರನ್ವಯ ವರದಿ ಸಂಖ್ಯೆ: ಕಂಪ್ಲೇಂಟ್/ಉಪಲೋಕ್/ಜಿಎಲ್‌ಬಿ/ 2376/2013/ಡಿಆರ್‌ಇ-5, ದಿ:23.1.2019.

**ಪ್ರಸ್ತಾವನೆ:-**

ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಮೇಲೆ ಓದಲಾದ ಕ್ರಮ ಸಂಖ್ಯೆ(1)ರ ದಿನಾಂಕ:30.1.2019ರ ಅರೆ ಸರ್ಕಾರಿ ಪತ್ರದ ಜೊತೆ ಮಾನ್ಯ ಉಪಲೋಕಾಯುಕ್ತರವರ ಲೋಕಾಯುಕ್ತ ಕಾಯ್ದೆ -1984ರ ಕಲಂ 12(3) ರ ವರದಿ, ಇನ್ನಿತರ ದಾಖಲೆಗಳ ಪ್ರತಿಗಳನ್ನು ಲಗತ್ತಿಸಿ, ಕಳುಹಿಸಿ, ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸಿನಂತೆ ಕ್ರಮ ಕೈಗೊಳ್ಳುವಂತೆ, ಕೈಗೊಂಡ ಕ್ರಮದ ಮಾಹಿತಿಯನ್ನು ವರದಿ ಮಾಡುವಂತೆ ಕೋರಿರುತ್ತಾರೆ.

ಮಾನ್ಯ ಉಪ ಲೋಕಾಯುಕ್ತರವರ ದಿನಾಂಕ:23.1.2019 ರ ಲೋಕಾಯುಕ್ತ ಕಾಯ್ದೆ ಕಲಂ 12(3) ರ ವರದಿ ಹಾಗೂ ಇತರೆ ದಾಖಲೆಗಳನ್ನು ಪರಿಶೀಲಿಸಲಾಗಿ, ಶ್ರೀ ಟಿ.ಎಂ.ಶೇಕ್ಷಾವಲಿ. ದ್ವಿ.ದ.ಸ, ಪಂ.ರಾ.ಇಂ ಉಪವಿಭಾಗ, ಸಂಡೂರು ಇವರ ವಿರುದ್ಧ ಪೊಲೀಸ್ ಉಪಾಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಬಳ್ಳಾರಿರವರು ಅಪರಾಧ ಸಂಖ್ಯೆ:5/2014 ಅನ್ನು ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ-1988 ರ ಕಲಂ 13 (1) (ಇ) ಮತ್ತು 12(2) ರ ಅನುಸಾರ ದಾಖಲಿಸಿಕೊಂಡು ಕೈಗೊಳ್ಳಲಾದ ತನಿಖೆಯಲ್ಲಿ ಶ್ರೀ ಟಿ.ಎಂ.ಶೇಕ್ಷಾವಲಿ ಇವರು ತಮ್ಮ ಬಲ್ಲ ಆದಾಯ ಮೂಲಗಳಿಗಿಂತ ಶೇ 148.50% ರಷ್ಟು ಆಸ್ತಿಯನ್ನು ಅಕ್ರಮವಾಗಿ ಹೊಂದಿರುವ ಆರೋಪಗಳು ಕಂಡು ಬಂದಿದ್ದು ಅದರಂತೆ ಸದರಿಯವರ ವಿರುದ್ಧ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಬಳ್ಳಾರಿ ಇಲ್ಲಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುವುದನ್ನು ಉಲ್ಲೇಖಿಸಿ, ಶ್ರೀ ಟಿ.ಎಂ.ಶೇಕ್ಷಾವಲಿ. ದ್ವಿ.ದ.ಸ, ಪಂ.ರಾ.ಇಂ ಉಪವಿಭಾಗ, ಸಂಡೂರು ಇವರ ವಿರುದ್ಧದ ತನಿಖೆಯಲ್ಲಿ ಕಂಡು ಬಂದಿರುವ ವಿವಿಧ ಸ್ಥಿರಾಸ್ತಿ ಮತ್ತು ಚರಾಸ್ತಿಗಳನ್ನು ವಿವರವಾಗಿ ಕಲಂ 12(3) ರ ವರದಿಯಲ್ಲಿ ಪಟ್ಟಿ ಮಾಡಿ ಎದುರುದಾರ/ ಆಪಾದಿತರು ಸದರಿ ಸ್ಥಿರಾಸ್ತಿ ಮತ್ತು ಚರಾಸ್ತಿಗಳು, ನಗದು ಹಣ, ಸಾಲದ ವಿವರಗಳನ್ನು ಕರ್ನಾಟಕ ನಾಗರೀಕ ಸೇವಾ (ವ.ನಿ.ಮೇ) ನಿಯಮಗಳು 1966 ರ ನಿಯಮ 23 ರಂತೆ ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆಯದೇ ಹೊಂದಿರುತ್ತಾರೆಂದು ಹಾಗೂ ಈ ರೀತಿ ಹೊಂದಿರುವ ಸ್ಥಿರಾಸ್ತಿ ಮತ್ತು ಚರಾಸ್ತಿಗಳ ವಿವರಗಳನ್ನು ಸಕ್ಷಮ ಪ್ರಾಧಿಕಾರಕ್ಕೆ ವಾರ್ಷಿಕ ಸ್ವತ್ತು ಮತ್ತು ಹೊಣೆಗಾರಿಕೆ ಪಟ್ಟಿಯಲ್ಲಿ ವರದಿ ಮಾಡದೇ ಕ.ನಾ.ಸೇ (ನಡತೆ) ನಿಯಮಗಳನ್ನು ಉಲ್ಲಂಘಿಸಿರುತ್ತಾರೆಂದು ಉಲ್ಲೇಖಿಸಿರುತ್ತಾರೆ.

---2

ಆಪಾದಿತರ ವಿರುದ್ಧದ ಆರೋಪಗಳ ಕುರಿತು ಸದರಿಯವರಿಂದ ಆಕ್ಷೇಪಣೆಯನ್ನು ಪಡೆದಿದ್ದು ಅವುಗಳನ್ನು ಪರಿಶೀಲಿಸಿ, ಎದುರುದಾರ/ಆಪಾದಿತರು ಪೂರ್ವಾನುಮತಿ ಪಡೆಯದೇ ಬೃಹತ್ ಸಂಖ್ಯೆ/ಪ್ರಮಾಣದ ಸ್ಥಿರಾಸ್ತಿ ಹಾಗೂ ಚರಾಸ್ತಿ ಅರ್ಜಿಸಿರುವ ವಿವರಗಳನ್ನು ಕಲಂ 12(3) ರ ವರದಿಯಲ್ಲಿ ವಿವರವಾಗಿ ಪಟ್ಟಿ ಮಾಡಿರುತ್ತಾರೆ. ಅವುಗಳ ಪೈಕಿ ಕೆಲವು ವಿವರಗಳು ಕೆಳಕಂಡಂತಿವೆ:-

1. ಸಂಡೂರು ತಾಲ್ಲೂಕು ಕೃಷ್ಣ ನಗರ ಗ್ರಾಮ ಪಂಚಾಯತ್ ಸರ್ಕಾರಿ ಖುಷ್ಕೀ ಸರ್ವೇ ನಂ 188 ರಲ್ಲಿ 1 ಎಕರೆ ಜಮೀನಿನನ್ನು ಅಗಸರ ಕುಮಾರಪ್ಪ ಇವರಿಂದ ಆರೋಪಿತರ ಪತ್ನಿ ಶ್ರೀಮತಿ ಟಿ.ಜರೀನಾ ಇವರ ಹೆಸರಿನಲ್ಲಿ (ನೊಂದಣಿ ಕಛೇರಿ ದಾಸ್ತುವೇಜು ಸಂಖ್ಯೆ: 254/2005-06) ದಿನಾಂಕ:16.7.2005 ರಂದು ರೂ.66.000 ಗಳಿಗೆ ಸಕ್ಷಮ ಪ್ರಾಧಿಕಾರದ ಪೂರ್ವಾನುಮತಿ ಇಲ್ಲದೇ ಖರೀದಿಸಿರುವುದು.
2. ಸಂಡೂರು ಪಟ್ಟಣ ಪಂಚಾಯತ್ ಸರ್ಕಾರಿ ಖುಷ್ಕಿ ಸರ್ವೆ ನಂ 388 ರಲ್ಲಿ 95 ಸೆಂಟ್ಸ್ ಜಮೀನನ್ನು ಆರೋಪಿತರ ಹೆಸರಿನಲ್ಲಿ ದಿನಾಂಕ:5.3.2005 ರಂದು (ನೊಂದಣಿ ಕಛೇರಿ ದಾಸ್ತುವೇಜು ಸಂಖ್ಯೆ: 1114/2004-05) ಸಕ್ಷಮ ಪ್ರಾಧಿಕಾರದ ಪೂರ್ವಾನುಮತಿ ಇಲ್ಲದೆ ದಾನ ಪತ್ರದ ಮೂಲಕ ಪಡೆದಿರುವುದು.
3. ಸಂಡೂರು ತಾಲ್ಲೂಕಿನ ಕ್ರಿಷ್ಣಾನಗರ ಗ್ರಾಮದ ವಾರ್ಡ್ ನಂ. 4 ಮ.ಸಂ;880 ಆಶ್ರಯ ಕಾಲೋನಿಯಲ್ಲಿನ ನಿರ್ಮಾಣ ಹಂತದಲ್ಲಿರುವ ಕಟ್ಟಡವನ್ನು ಆರೋಪಿತರ ಪತ್ನಿ ಶ್ರೀಮತಿ ಟಿ.ಜರೀನಾ ಇವರ ಹೆಸರಿನಲ್ಲಿ 2014ರಲ್ಲಿ ರೂ.53,00,000/-ಮೊತ್ತಕ್ಕೆ ಸಕ್ಷಮ ಪ್ರಾಧಿಕಾರದ ಪೂರ್ವಾನುಮತಿ ಇಲ್ಲದೇ ಪಡೆದಿರುತ್ತಾರೆಂದು;
4. ಅಸೆಸ್‌ಮೆಂಟ್ ನಂ.2413 ಮತ್ತು 2414 ರಲ್ಲಿ ಸಂಡೂರು ಪಟ್ಟಣ ವಾರ್ಡ್ ನಂ.1 ದೌಲತ್ ಪುರ ರಸ್ತೆಯ ಪಕ್ಕದಲ್ಲಿ ಸಂಡೂರು ಗ್ರಾಮದ ಸರ್ವೆ ನಂ. 204 ರಲ್ಲಿರುವ ಪ್ಲಾಟ್ ನಂ.50 ಮತ್ತು 51 ರಲ್ಲಿ 270 ಮೀಟರ್ ಅಳತೆ ಉಳ್ಳ ಖಾಲಿ ನಿವೇಶನವನ್ನು ಆರೋಪಿತರ ಹೆಸರಿನಲ್ಲಿ ದಿನಾಂಕ:1,26,000/- ಗಳ ಮೊತ್ತಕ್ಕೆ ನೊಂದಣಿ ದಸ್ತಾವೇಜು ಸಂಖ್ಯೆ 75/2003-04 ರಂತೆ ಸಕ್ಷಮ ಪ್ರಾಧಿಕಾರದ ಪೂರ್ವಾನುಮತಿ ಪಡೆಯದೇ ಖರೀದಿಸಲಾಗಿರುತ್ತದೆಯೆಂದು;
5. ಆರೋಪಿತರು ಮತ್ತು ಅವರ ಕುಟುಂಬದ ಸದಸ್ಯರ ಹೆಸರಿನಲ್ಲಿ ಸಕ್ಷಮ ಪ್ರಾಧಿಕಾರದ ಅನುಮತಿ ಇಲ್ಲದೆ ರೂ. 5,82,716/- ಗಳಷ್ಟು ಬೆಲೆಬಾಳುವ ಮಹೀಂದ್ರ ಬೋಲೆರೋ ಸಂಖ್ಯೆ:ಕೆಎ-35/ಎಂ.8511 ನ್ನು ಖರೀದಿಸಿರುವುದು, ದ್ವಿ ಚಕ್ರ ವಾಹನ ಸಂಖ್ಯೆ:ಕೆಎ 35/ವಿ8786 ನ್ನು ಮಗ ಶ್ರೀ ಹನೀಫ್ ಇವರ ಹೆಸರಿನಲ್ಲಿ ರೂ. 48,804/- ವೆಚ್ಚದಲ್ಲಿ ಖರೀದಿಸಿರುವ ಬಗ್ಗೆ ಹಾಗೂ ಇನ್ನಿತರ ವಾಹನಗಳನ್ನು ಸಹ ಪೂರ್ವಾನುಮತಿ ಇಲ್ಲದೇ ಖರೀದಿಸಿರುವ ಬಗ್ಗೆ ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಮಾನ್ಯ ಉಪಲೋಕಾಯುಕ್ತರು ಶ್ರೀ ಟಿ.ಎಂ.ಶೇಕ್ಷಾವಲಿ, ದ್ವಿ.ದ.ಸ ಇವರು ಬೃಹತ್ ಪ್ರಮಾಣದ ಸ್ಥಿರಾಸ್ತಿ/ಚರಾಸ್ತಿಗಳನ್ನು ಅರ್ಜಿಸಿದ್ದು, ಪ್ರಶ್ನಿತ ಆಸ್ತಿಗಳನ್ನು ಅರ್ಜಿಸುವ ಪೂರ್ವದಲ್ಲಿ ಅಥವಾ ನಂತರ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆದಿರುವ ಕುರಿತು ಸಂಬಂಧಿಸಿದ ದಾಖಲೆಗಳನ್ನು ಸಲ್ಲಿಸಲು ತಿಳಿಸಿದ್ದಾಗ್ಯೂ ಆರೋಪಿತರು ದಾಖಲೆಗಳನ್ನು ಸಲ್ಲಿಸದೇ ಇರುವುದನ್ನು ಉಲ್ಲೇಖಿಸಿ, ಶ್ರೀ ಟಿ.ಎಂ.ಶೇಕ್ಷಾವಲಿ, ಇವರ ವಿರುದ್ಧ ಕ.ನಾ.ಸೇ (ನಡತೆ) ನಿಯಮಗಳು 1966 ರ ನಿಯಮಗಳ ಉಲ್ಲಂಘನೆಯ ಆರೋಪಗಳ ಕುರಿತಂತೆ ಕ.ನಾ.ಸೇ (ವ.ನಿ.ಮೇ) ನಿಯಮಗಳು 1957 ರ ನಿಯಮ 11 ರಡಿ ಇಲಾಖಾ ವಿಚಾರಣೆ ನಡೆಸಲು ಪ್ರಸ್ತಾಪಿಸಿ ಪ್ರಕರಣವನ್ನು ತಮಗೆ ವಹಿಸುವಂತೆ ಕೋರಿರುತ್ತಾರೆ.

---3

ಮಾನ್ಯ ಉಪಲೋಕಾಯುಕ್ತರ ಕಲಂ 12(3) ರ ವರದಿಯಲ್ಲಿ ನಮೂದಿಸಿರುವ ವಿವರಗಳನುಸಾರ ಆಪಾದಿತರು ತಮ್ಮ ಹಾಗೂ ತಮ್ಮ ಕುಟುಂಬದ ಸದಸ್ಯರ ಹೆಸರಿನಲ್ಲಿ ಬೃಹತ್ ಸಂಖ್ಯೆಯ ಸ್ಥಿರಾಸ್ತಿ ಮತ್ತು ಚರಾಸ್ತಿಗಳನ್ನು ಗಳಿಸಿದ್ದರೂ, ಸದರಿ ಆಸ್ತಿಗಳನ್ನು ಅರ್ಜಿಸುವ ಪೂರ್ವದಲ್ಲಿ ಸಕ್ಷಮ ಪ್ರಾಧಿಕಾರದ ಪೂರ್ವಾನುಮತಿಯನ್ನು ಪಡೆಯುವುದಾಗಲಿ. ಪ್ರತಿ ವರ್ಷ ಸಲ್ಲಿಸಿರುವ ಆಸ್ತಿ ಮತ್ತು ದಾಯಿತ್ವಗಳ ಪಟ್ಟಿಯಲ್ಲಿ ಅದರ ವಿವರಗಳನ್ನು ನಮೂದಿಸಿರುವುದು ಕಂಡು ಬರುವುದಿಲ್ಲ. ಇದು ಕ.ನಾ.ಸೇ (ನಡತೆ) ನಿಯಮಗಳು 1966 ರ ನಿಯಮಗಳ ಸ್ಪಷ್ಟ ಉಲ್ಲಂಘನೆಯಾಗಿರುತ್ತದೆ. ಆದ್ದರಿಂದ, ಶ್ರೀ ಟಿ.ಎಂ.ಶೇಕ್ಷಾವಲಿ, ಇವರು ತಮ್ಮ ಸೇವಾ ಅವಧಿಯಲ್ಲಿ ಸಕ್ಷಮ ಪ್ರಾಧಿಕಾರದ ಪೂರ್ವಾನುಮತಿ ಇಲ್ಲದೆ ಬೃಹತ್ ಪ್ರಮಾಣದ ಸ್ಥಿರಾಸ್ತಿ ಮತ್ತು ಚರಾಸ್ತಿಗಳನ್ನು ತಮ್ಮ ಹಾಗೂ ತಮ್ಮ ಕುಟುಂಬದ ಸದಸ್ಯರ ಹೆಸರಿನಲ್ಲಿ ಅರ್ಜಿಸುವ ಮೂಲಕ ಕ.ನಾ.ಸೇ (ನಡತೆ) ನಿಯಮಗಳು 1966 ರ ನಿಯಮಗಳನ್ನು ಉಲ್ಲಂಘಿಸಿರುವುದು ಕಂಡ ಬಂದಿರುವ ಹಿನ್ನೆಲೆಯಲ್ಲಿ, ಸದರಿ ಆರೋಪಗಳ ಬಗ್ಗೆ ವಿವರವಾದ ಇಲಾಖಾ ವಿಚಾರಣೆ ನಡೆಸುವುದು ಸೂಕ್ತವೆಂದು ತೀರ್ಮಾನಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**<u>ಆದೇಶ ಸಂಖ್ಯೆ:ಗ್ರಾಅಪ 08 ಇಎನ್‌ಕ್ಯೂ 19, ಬೆಂಗಳೂರು, ದಿನಾಂಕ:18.2.2019</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಸರ್ಕಾರವು ಶ್ರೀ ಟಿ.ಎಂ.ಶೇಕ್ಷಾವಲಿ, ದ್ವಿದ.ಸ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಸಂಡೂರು ಇವರುಗಳ ವಿರುದ್ಧದ ಆರೋಪಗಳ ಕುರಿತು ವಿವರವಾದ ಇಲಾಖಾ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ರ ನಿಯಮ-11 ರಂತೆ ನಡೆಸುವ ಸಲುವಾಗಿ ಪ್ರಕರಣವನ್ನು ಸದರಿ ನಿಯಮಗಳ ನಿಯಮ 14(ಎ) ರ ಅನುಸಾರ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಿದೆ.

ಕರ್ನಾಟಕ ರಾಜ್ಯ ಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

18/02/19
(ರಘುನಾಥಗೌಡ ಎಸ್ ಪಾಟೀಲ)
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಎ)(ಪ್ರ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

<u>ಇವರಿಗೆ</u>

1. ಮಹಾಲೇಖಪಾಲರು,(ಲೆಕ್ಕ ಪತ್ರ 1&2)/(ಆಡಿಟ್) ಕರ್ನಾಟಕ, ಬೆಂಗಳೂರು.
2. ನಿಬಂಧಕರು, ಕರ್ನಾಟಕ ಲೋಕಾಯುಕ್ತ ಕಛೇರಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು.
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬಳ್ಳಾರಿ.
5. ಸಂಬಂಧಿಸಿದ ನೌಕರರಿಗೆ (ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ,ಜಿಲ್ಲಾ ಪಂಚಾಯತ್, ಬಳ್ಳಾರಿ ರವರ ಮುಖಾಂತರ)
6. ಮಾನ್ಯ ಗ್ರಾ.ಅ.ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿ.
7. ಗ್ರಾ.ಅ.ಪಂ.ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ/ಉಪ ಕಾರ್ಯದರ್ಶಿ/ಇವರ ಆಪ್ತ ಕಾರ್ಯದರ್ಶಿ/ಆಪ್ತ ಸಹಾಯಕರು
8. ಶಾಖಾ ರಕ್ಷಾ ಕಡತ/ಕಂಪ್ಯೂಟರ್ ಸೆಲ್/ ಹೆಚ್ಚುವರಿ ಪ್ರತಿ.